MITE
Invent Solutions

MANGALORE INSTITUTE OF TECHNOLOGY & ENGINEERING
(A Unit of Rajalaxmi Education Trust®, Mangalore)
Autonomous Institute affiliated to VTU, Belagavi, Approved by AICTE, New Delhi
Accredited by NAAC with A+ Grade & ISO 9001:2015 Certified Institution




# Course Name : ಸಾಂಸ್ಕೃತಿಕ ಕನ್ನಡ

## Semester : 1st / 2nd

## Course Code : 23HMCC109

# Module 2

| Module 2:ಆಧುನಿಕ ಪೂರ್ವದ ಕಾವ್ಯ ಭಾಗ | No. of Hrs: 2 |
|---|---|

ವಚನಗಳು: ಬಸವಣ್ಣ, ಅಕ್ಕಮಹಾದೇವಿ, ಅಲ್ಲಮಪ್ರಭು, ಆಯ್ದಕ್ಕಿ ಲಕ್ಕಮ್ಮ

ಕೀರ್ತನೆಗಳು: ಅದರಿಂದೇನು ಫಲ ಇದರಿಂದೇನು ಫಲ -ಪುರಂದರದಾಸರು

ತಲ್ಲಣಿಸದಿರು ಕಂಡ್ಯ ತಾಳು ಮನವೇ -ಕನಕದಾಸರು

ಪೂರಕ ಓದು: ಆಯ್ದಕ್ಕಿ ಮಾರಯ್ಯ ಮತ್ತು ಜೇಡರ ದಾಸಿಮಯ್ಯನವರ ವಚನಗಳು

ತತ್ವಪದಗಳು : ಸಾವಿರ ಕೊಡಗಳ ಸುಟ್ಟು- ಶಿಶುನಾಳಶರೀಫ

# ವಚನ ಸಾಹಿತ್ಯ

- 12 ನೇ ಶತಮಾನ
- ರಾಜಾಶ್ರಯದದಿಕ್ಕಾರ
- ಜನರ ಭಾಷೆ
- ಸಾರ್ವಕಾಲಿಕವಾದ ಮಾನವೀಯ ಮೌಲ್ಯಗಳ ಪ್ರತಿಬಿಂಬ

# ವಚನಕಾರರ ಪರಿಚಯ:

ಕರ್ನಾಟಕದಲ್ಲಿ ನಡೆದ ಹನ್ನೆರಡನೇ ಶತಮಾನದ ಶರಣ ಚಳವಳಿ ಸಮಾನತೆ ಮತ್ತು ಮಾನವತೆಯನ್ನು ಸಾರಿದ ಒಂದು ಐತಿಹಾಸಿಕ ಘಟನೆ. ಆ ಚಳವಳಿಯ ಭಾಗವಾಗಿ ರೂಪುಗೊಂಡ ವಚನ ಸಾಹಿತ್ಯ ಇವತ್ತಿಗೂ ಅತ್ಯಂತ ಪ್ರಸ್ತುತ. ಸಾಮಾಜಿಕ ಅಸಮಾನತೆ, ಧಾರ್ಮಿಕ ಗೊಡ್ಡು ಸಂಪ್ರದಾಯಕ್ಕೆ ಪ್ರತಿಕ್ರಿಯೆಯಾಗಿ ಬಂದ ವಚನ ಸಾಹಿತ್ಯ ಉಂಟು ಮಾಡಿದ ಅರಿವು ಸಾರ್ವಕಾಲಿಕವಾದದ್ದು. ಶರಣ ಚಳವಳಿಗೆ ಪ್ರೇರಕ ಶಕ್ತಿಯಾಗಿ ನಿಂತ ಮಹಾ ಮಾನವತಾವಾದಿ ಬಸವಣ್ಣನವರ ನೇತೃತ್ವದಲ್ಲಿ, ವಿವಿಧ ವೃತ್ತಿಗಳಿಗೆ ಸೇರಿದ ನೂರಾರು ಕಾಯಕ ಜೀವಿಗಳು ತಮ್ಮ ತಮ್ಮ ಅನುಭವ ಜ್ಞಾನವನ್ನು ಸಾಮೂಹಿಕವಾಗಿ ಚಿತ್ತರಿಸಿದರು. ಅಪೂರ್ವ ಸಂದರ್ಭ ಅದಾಗಿತ್ತು. ಸಾಮಾಜಿಕವಾದ ಕ್ರಾಂತಿಗೂ ನಾಂದಿ ಹಾಡಿದ ಆ ಚಳವಳಿಯ ಉತ್ಪನ್ನವು ಈ ವಚನಗಳನ್ನು ಸೃಜಿಸಿತು. ಅಂಧಕಾರದಲ್ಲಿದ್ದ ಸಮಾಜಕ್ಕೆ ಅರಿವಿನ ಬೆಳಗನ್ನು ತೋರಿತು.. ವಚನ ಚಳವಳಿಯನ್ನು ಸಾಕ್ಷೀಕರಿಸಿದ ಇನ್ನೂ ಅನೇಕ ಪ್ರಮುಖ ವಚನಕಾರರು ಇದ್ದರಾದರೂ ಇಲ್ಲಿ ಸಾಂಕೇತಿಕವಾಗಿ ಈ ಆರು ಜನರ ಒಂದೊಂದು ವಚನಗಳನ್ನು ಮಾತ್ರ ನೀಡಲಾಗಿದೆ.

VTU-Samskruthika N

# ಅಲ್ಲಮಪ್ರಭು

ಸ್ಥಳ – ಶಿವಮೊಗ್ಗ ಜಿಲ್ಲೆಯ ಬಳ್ಳಿಗಾವೆ

ಅಂಕಿತ ನಾಮ – ಗುಹೇಶ್ವರ / ಗೊಹೇಶ್ವರ

ಲಭ್ಯ ವಚನ – ಸು. 1294

ಐಕ್ಯ ಸ್ಥಳ - ಶ್ರೀಶೈಲ

- ಅನುಭವಮಂಟಪದ ಅಧ್ಯಕ್ಷರು

# ಅಲ್ಲಮಪ್ರಭು

ಕಳ್ಳಗಂಜಿ ಕಾಡ  ಹೊಕ್ಕಡೆ ಹುಲಿ ತಿಂಬುದ ಮಾಬುದೇ ?
ಹುಲಿಗಂಜಿ ಹುತ್ತವ ಹೊಕ್ಕಡೆ ಸರ್ಪ ತಿಂಬುದ ಮಾಬುದೇ?
ಕಾಲಕ್ಕಂಜಿ ಭಕ್ತನಾದಡೆ ಕರ್ಮ ತಿಂಬುದ ಮಾಬುದೇ ?
ಇಂತೀ ಮೃತ್ಯುವಿನ ಬಾಯ ತುತ್ತಾದ
ವೇಷಡಂಬಕರ ನಾನೇನೆಂಬೆ ಗುಹೇಶ್ವರಾ !!

# ಪದಗಳ ಅರ್ಥ

ಅಂಜು – ಹೆದರು

ತಿಂಬು – ತಿನ್ನು

ಹೊಕ್ಕು – ಅಡಗು, ಬಚ್ಚಿಟ್ಟಿಕೊ

ಕಾಲ – ಯಮ, ಸಾವು

# ವಚನದ ಆಶಯ

ಈ ವಚನದಲ್ಲಿ ಅಲ್ಲಮಪ್ರಭು ಅವರು ಮನುಷ್ಯ ಹೇಗೆ ಕಷ್ಟವನ್ನು ಎದುರಿಸಲಾಗದೆ ಇನ್ನೊಂದು ಕಷ್ಟದಲ್ಲಿ ಸಿಕ್ಕಿ ಹಾಕಿಕೊಂಡು ಬಳಲುತ್ತಾನೆ ಎಂಬುದನ್ನು ಕೆಲವು ನಿದರ್ಶನಗಳ ಮೂಲಕ ವಿವರಿಸುತ್ತಾರೆ.

ಕಳ್ಳನಿಗೆ ಹೆದರಿಕೊಂಡು ಕಾಡಿನ ಒಳಗೆ ಅಡಗಿದರೆ ಹುಲಿಯ ಬಾಯಿಗೆ ಆಹಾರವಾಗುತ್ತಾನೆ.. ಆ ಹುಲಿಗೆ ಹೆದರಿ ಹುತ್ತದಲ್ಲಿ ಅಡಗಿದರೆ, ಅಲ್ಲಿ ಹಾವಿನ ಕೈಯಲ್ಲಿ ಸಿಕ್ಕಿ ಹಾಕಿಕೊಳ್ಳುತ್ತೇನೆ.. ತನಗೆ ಬಂದ ಕಷ್ಟವನ್ನು ಎದುರಿಸಬಹುದಾಗಿದ್ದರೂ ತನ್ನ ಪಲಾಯನವಾದದಿಂದ ಮತ್ತೊಂದು ದೊಡ್ಡ ಕಷ್ಟದಲ್ಲಿ ಸಿಲುಕಿ ನಲುಗುತ್ತಾನೆ..

ಕೊನೆಗೆ ಸಾವಿಗೆ ಅಂಜಿ ದೇವರ ನೆನೆಯುತ್ತಾ ಭಕ್ತನಾದರೆ ತನ್ನ ಕರ್ಮಗಳನ್ನು ತೊಳೆಯಲು ಸಾಧ್ಯವಿಲ್ಲ, ಬದಲಾಗಿ ತನ್ನ ಕರ್ಮಗಳೇ ಅವನನ್ನು ಕೊಲ್ಲುತ್ತದೆ. ಇಲ್ಲಿ ಭಕ್ತನಾದವನನ್ನು ವೇಷಡಂಬಕ ಎಂದು ಕರೆಯುತ್ತಾ, ಅಂಥವರ ಬಗ್ಗೆ ಕನಿಕರ ವ್ಯಕ್ತಪಡಿಸುತ್ತಾರೆ

Activate Windows
Go to Settings to activate Windows.

# ಮಾದರಿ ಪ್ರಶ್ನೆಗಳು – ಬಹು ಆಯ್ಕೆಯ ಪ್ರಶ್ನೆಗಳು.

1 ಅಂಜಿ ಪದದ ಅರ್ಥವೇನು?

1ಆನೆ 2.ಧೈರ್ಯ 3. ಭಯ 4.ದುರ್ಬಲ

2 ಕಳ್ಳಗಂಜಿ ______ ಹೊಕ್ಕಡೆ ಹುಲಿ ತಿಂಬುದ ಮಾಬುದೇ?

1. ಮನೆ 2. ಕಾಡು 3. ಸ್ಮಶಾನ 4.ಹುತ್ತ.

3 ಹುಲಿಗಂಜಿ ಹುತ್ತವ ಹೊಕ್ಕಡೆ ______ ತಿಂಬುದ ಮಾಬುದೇ?

1.ಕರ್ಮ 2. ಹುಲಿ 3. ಸರ್ಪ 4. ಕಾಲ.

4 ಕಾಲಕ್ಕಂಜಿ ಭಕ್ತನಾದಡೆ ______ ತಿಂಬುದ ಮಾಬುದೆ?

1 ಸರ್ಪ 2. ಕೋತಿ 3. ಕುದುರೆ 4.ಕರ್ಮ.

5 ಶಿವಮೊಗ್ಗ ಜಿಲ್ಲೆಯ ______ ಅಲ್ಲಮ್ಮಪ್ರಭು ಅವರ ಜನ್ಮಸ್ಥಳ.

1 ಬಳ್ಳಿಗಾವೆ 2. ಮುದನೂರು 3. ಅಮುಗೇಶ್ವರ 4. ಲಿಂಗಸೂರು.

Activate Windows
Go to Settings to activate Windows.

# ಬಸವಣ್ಣ

ಕಾಲ – 1134

ಸ್ಥಳ – ಬಿಜಾಪುರ ಜಿಲ್ಲೆಯ ಬಸವನ ಬಾಗೇವಾಡಿ

ತಂದೆ – ತಾಯಿ – ಮಾದಿರಾಜ – ಮಾದಲಾಂಬಿಕೆ

ಅಂಕಿತನಾಮ - ಕೂಡಲಸಂಗಮದೇವ

- ❖ ಧಾರ್ಮಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ಕ್ರಾಂತಿಯ ಕೇಂದ್ರ ಪುರುಷ
- ❖ ಬಿಜ್ಜಳನ ಸ್ಥಾನದಲ್ಲಿ ಕೋಶಾಧಿಕಾರಿ
- ❖ ಭಕ್ತಿ, ಜ್ಞಾನ, ಮಾನವೀಯತೆ ಮತ್ತು ವೈರಾಗ್ಯದ ಪರವಾದ ವಚನಗಳು
- ❖ ಜಾತಿ, ಕುಲ, ಲಿಂಗ ಭೇದದಿಂದ ಹೊರತಾದ ಸಮಾಜ ನಿರ್ಮಿತಿ ಪ್ರಮುಖ ಗುರಿ

# ಬಸವಣ್ಣನವರ ವಚನ

ಕರಿ ಘನ ಅಂಕುಶ ಕಿರಿದೆನ್ನಬಹುದೆ ಬಾರದಯ್ಯಾ,
ಗಿರಿ ಘನ ವಜ್ರ ಕಿರಿದೆನ್ನಬಹುದೆ? ಬಾರದಯ್ಯ,
ತಮಂದ ಘನ ಜ್ಯೋತಿ ಕಿರಿದೆನ್ನಬಹುದೆ
ಬಾರದಯ್ಯಾ,
ಮರಹು ಘನ ನಿಮ್ಮ ನೆನೆವ ಮನ
ಕಿರಿದೆನ್ನಬಹುದೆ? ಬಾರದಯ್ಯ.
ಕೂಡಲಸಂಗಮದೇವಾ |||

# ಪದಗಳ ಅರ್ಥ

ಕರಿ – ಆನೆ

ಗಿರಿ – ಪರ್ವತ

ತಮಂದ – ಕತ್ತಲು

ಘನ – ದೊಡ್ಡದು

ಕಿರಿ - ಚಿಕ್ಕದು

# ಬಸವಣ್ಣನವರ ವಚನದ ಆಶಯ

ಇಲ್ಲಿ ಬಸವಣ್ಣನವರು ಬಲ ಮತ್ತು ದುರ್ಬಲ ಎಂದು ಭಾವಿಸಿರುವ ಕೆಲವು ವಸ್ತುಗಳ ಬಗ್ಗೆ ನಮಗೆ ಇರುವ ತಪ್ಪು ತಿಳಿವಳಿಕೆಯನ್ನು ಕೆಲವು ನಿದರ್ಶನಗಳ ಮೂಲಕ ಹೇಳುತಾರೆ. ಮೊದಲನೆಯದು ದಿನ ನಿತ್ಯದ ಘಟನೆ,ಮತ್ತೊಂದು ಪೌರಾಣಿಕ ಹಿನ್ನೆಲೆಯಿಂದ ಮತ್ತು ಇನ್ನೊಂದು ಭೌತಿಕ ತತ್ವ ಉಳ್ಳ ನಿದರ್ಶನ. ಆನೆ ಗಾತ್ರದಲ್ಲಿ ದೊಡ್ಡದು ಮತ್ತು ಬಲಶಾಲಿ ಕೂಡ, ಆದರೆ ಅಂತ ಆನೆಯನ್ನು ಅದರ ಮಾವುತ ಒಂದು ಅಂಕುಶ ದಿಂದ(ಸಣ್ಣ ಸಲಾಕೆ)ಅದನ್ನು ಹಿಡಿದಿಟ್ಟುಕೊಳ್ಳುತ್ತಾನೆ. ಅದೇ ರೀತಿ ಒಂದು ಪರ್ವತ ಕೂಡ ಬಹಳ ದೊಡ್ಡದಾಗಿ ಕಾಣುತ್ತದೆ,ಪುರಾಣದ ಪ್ರಕಾರ ಇಂದ್ರ ತನ್ನ ವಜ್ರಾಯುಧದಿಂದ ಪರ್ವತವನ್ನು ನಾಶ ಮಾಡುತ್ತಾನೆ.ಇನ್ನು ಕತ್ತಲು ಬಹಳ ಘೋರವಾಗಿ ಕಂಡರೂ ಒಂದು ಸಣ್ಣ ಬೆಳಕಿನ ಕಿಡಿ ಅದನ್ನು ಮುಚ್ಚಬಲ್ಲದು. ಆದ್ದರಿಂದ ವಸ್ತುವಿನ ಗಾತ್ರದ ಮೂಲಕ ಅದರ ದುರ್ಬಲತೆಯನ್ನು ಅಳೆಯಬಾರದು ಎಂದು ಹೇಳುತ್ತಾ ಮನುಷ್ಯನ ಸಹಜ ಗುಣವಾದ ಮರೆಯುವಿಕೆ ಘನವಲ್ಲ,ಬದಲಾಗಿ ದೇವರನ್ನು ಕಂಡುಕೊಳ್ಳಲು ಶಿವನ ಸ್ವರೂಪವಾದ ಕೂಡಲಸಂಗಮದೇವನನ್ನು ನೆನೆಯುವುದು ಮತ್ತು ಧ್ಯಾನಿಸುವುದೇ ಘನ ಎಂದು ಹೇಳುತಾರೆ.

Activate Windows
Go to Settings to activate Windows.

## ಮಾದರಿ ಪ್ರಶ್ನೆಗಳು – ಬಹು ಆಯ್ಕೆಯ ಪ್ರಶ್ನೆಗಳು.

1 ಕರಿ ಘನ ______ ಕಿರಿದೆನ್ನಬಹುದೆ ಬಾರದಯ್ಯಾ.

1.ಗಿರಿ 2. ತಮಂದ 3. ವಜ್ರ 4.ಅಂಕುಶ

2 ಬಸವಣ್ಣನವರ ತಂದೆಯ ಹೆಸರೇನು?

1ಮಾದಿರಾಜ 2.ನಿರಹಂಕಾರಿ 3. ಅನಿಮಿಷಯೋಗಿ 4. ನಿರ್ಮಲಶೆಟ್ಟಿ

3 ______ಘನ ವಜ್ರ ಕಿರಿದೆನ್ನಬಹುದೆ ಬಾರದಯ್ಯಾ.

1. ಜ್ಯೋತಿ 2. ನೆನಪು 3. ಮರೆವು 4. ಗಿರಿ

# ಅಕ್ಕಮಹಾದೇವಿ

ಕಾಲ – 12ನೇ ಶತಮಾನ

ಸ್ಥಳ – ಶಿವಮೊಗ್ಗ ಜಿಲ್ಲೆ ಶಿಕಾರಿ ತಾಲ್ಲೂಕಿನ ಉಡುತಡಿ

ತಂದೆ – ತಾಯಿ- ನಿರ್ಮಲಶೆಟ್ಟಿ – ಸುಮತಿ

ಅಂಕಿತ – ಚೆನ್ನಮಲ್ಲಿಕಾರ್ಜುನ

ಕೃತಿ – ಯೋಗಾಂಗ ತ್ರಿವಿದಿ,ಸೃಷ್ಠಿಯ ವಚನ ಮಂತ್ರಗೋಪ್ಯ ಇತ್ಯಾದಿ

ಐಕ್ಯ – ಶ್ರಿಶ್ಶೈಲದ ಕದಳಿವನ

- ಕನ್ನಡದ ಮೊದಲ ಕವಯತ್ರಿ
- ಶಿವಭಕ್ತೆ

Activate Windows

# ಅಕ್ಕಮಹಾದೇವಿ ವಚನ

ಗೂಗೆ ಕಣ್ಣ ಕಾಣಲರಿಯದೆ ರವಿಯ ಬಯ್ದುದು,
ಕಾಗೆ ಕಣ್ಣ ಕಾಣಲರಿಯದೆ ಶಶಿಯ ಬಯ್ದುದು,
ಕುರುಡ ಕಣ್ಣ ಕಾಣಲರಿಯದೆ ಕನ್ನಡಿಯ ಬಯ್ದನು,
ಇವರ ಮಾತೆಲ್ಲವೂ ಸಹಜವೇ,
ನರಕ ಸಂಸಾರದಲ್ಲಿ ಹೊದಕುಳಿಗೊಳ್ಳುತ್ತ (ದು:ಖ, ನೋವು)
ಶಿವನಿಲ್ಲ,ಮುಕ್ತಿಯಿಲ್ಲ,ಹುಸಿಯೆಂದಡೆ,
ನರಕದಲ್ಲಿಕ್ಕದೆ ಬಿಡುವನೇ ಚನ್ನಮಲ್ಲಿಕಾರ್ಜುನ !!!

## ಪದಗಳ ಅರ್ಥ

ಗೂಗೆ – ಗೂಬೆ

ರವಿ – ಸೂರ್ಯ

ಶಶಿ – ಚಂದ್ರ

ಹುಸಿ - ಸುಳ್ಳು

# ಅಕ್ಕನ ವಚನದ ಆಶಯ

ಗೂಗೆ ಕಣ್ಣ ಕಾಣಲರಿಯದೆ ರವಿಯ ಬಯ್ವುದು : ಈ ವಚನದಲ್ಲಿ ಅಕ್ಕಮಹಾದೇವಿಯು ಮನುಷ್ಯ ತನ್ನ ಅಸಹಾಯಕತೆ ಮತ್ತು ತನ್ನ ಸಂಕಟದಲ್ಲಿ ಬೇರೆಯವರನ್ನು ಹೇಗೆ ದೂಷಿಸುತ್ತಾನೆ ಎಂದು ಕೆಲವು ನಿದರ್ಶನಗಳ ಮೂಲಕ ಹೇಳುತಾರೆ. ಗೂಬೆಗೆ ಹಗಲಿನಲ್ಲಿ ಕಣ್ಣು ಕಾಣದ್ದರಿಂದ ಸೂರ್ಯನನ್ನು ಬಯ್ಯುತ್ತದೆ ,ಅದೇ ರೀತಿ ಕಾಗೆಯು ರಾತ್ರಿ ಸಮಯದಲ್ಲಿ ಚಂದ್ರನನ್ನು ಬಯ್ಯುತ್ತದೆ ಮತ್ತು ಕುರುಡ ತನ್ನ ಪ್ರತಿಬಿಂಬ ಕನ್ನಡಿಯಲ್ಲಿ ಕಾಣದ್ದಕ್ಕೆ ಕನ್ನಡಿಯನ್ನೇ ಬಯ್ಯುತ್ತಾನೆ.ಇದು ಪ್ರತಿಯೊಬ್ಬ ಅಸಹಾಯಕನ ಸಹಜ ಮಾತು ಎಂದು ಹೇಳುತ್ತಾ ಇದು ಸಂಸಾರದಲ್ಲಿ ನರಕವು ಹೊರಳಾಡುವಂತೆ ದೂಷಿಸುವುದು ಕೂಡ ಎಂದು ಹೇಳುತ್ತಾರೆ.

ಇಲ್ಲಿ ಶಿವನಿಲ್ಲ ಅಂದರೆ ತನಗಿರುವ ಶಕ್ತಿಯ ಬಗ್ಗೆ ನಂಬಿಕೆ ಮತ್ತು ಆತ್ಮ ವಿಶ್ವಾಸ ಇಲ್ಲದೆ ಬೇರೆಯದರ ಬಗ್ಗೆ ಅಪೇಕ್ಷಿಸುವ ಪರಿ ಮತ್ತು ಮುಕ್ತಿಯಿಲ್ಲ ಅಂದರೆ ಇಂಥ ಕಷ್ಟಗಳು ತನಗೆ ಮಾತ್ರ ಇರುವುದು ಎಂದು ಭಾವಿಸಿ ಸದಾ ಇನ್ನೊಬ್ಬರನ್ನು ದೂರುತ್ತಿರುವುದು. ತನಗಿರುವ ಅಗಾಧ ಶಕ್ತಿಯನ್ನು ಉಪಯೋಗಿಸಿಕೊಳ್ಳದೆ ಅನ್ಯರನ್ನು ದೂಷಿಸಿದರೆ ಅಂಥವರನ್ನು ಚನ್ನಮಲ್ಲಿಕಾರ್ಜುನ ನರಕಕ್ಕೆ ತಳ್ಳುತ್ತಾನೆ. ಅಂದರೆ ಅವರು ಯಾವಾಗಲೂ ಕಷ್ಟವನ್ನು ಅನುಭವಿಸುತ್ತಾರೆ ಎಂದು ಹೇಳುತ್ತಾ ತಮಗೆ ಲಭ್ಯವಿರುವ ಶಕ್ತಿಯನ್ನು ಸದ್ವಿನಿಯೋಗ ಮಾಡಿಕೊಂಡು ಒಳ್ಳೆ ರೀತಿಯಲ್ಲಿ ನಡೆದರೆ ಶಿವನನ್ನು ತಲುಪಬಹುದು ಅಂದರೆ ಮುಕ್ತಿಯ ಕಡೆ ನಡೆಯಬಹುದು ಎಂದು ಹೇಳುತ್ತಾರೆ.

Activate Windows
Go to Settings to activate Windows.

## ಮಾದರಿ ಪ್ರಶ್ನೆಗಳು – ಬಹು ಆಯ್ಕೆಯ ಪ್ರಶ್ನೆಗಳು.

1 ರವಿ ಪದದ ಸಮನಾರ್ಥಕ ಪದ ಯಾವುದು?

1. ಚಂದ್ರ 2. ಕವಿ 3. ಆಕಾಶ 4. ಸೂರ್ಯ.

2 ಕುರುಡ ______ ಕಾಣಲರಿಯದೆ ಕನ್ನಡಿಯ ಬಯ್ವನು.

1. ಕಾಗೆ 2. ರವಿ 3. ಕಣ್ಣು 4.ನೋವು

3 ಸರಿಯಾದ ವಾಕ್ಯವನ್ನು ಗುರುತಿಸಿ.

1. ಇವರ ಮಾತೆಲ್ಲವೂ ಅಸಹಜವೇ,
2. ಇವರ ಹಾಡಿಲ್ಲವೂ ಸಹಜವೇ,
3. ಇವರೆಲ್ಲರ ಮಾತೆಲ್ಲವೂ ಸಹಜವೇ,
4. ಇವರ ಮಾತೆಲ್ಲವೂ ಸಹಜವೇ,

# ಆಯ್ದಕ್ಕಿ ಲಕ್ಕಮ್ಮ

ಕಾಲ – 12ನೇ ಶತಮಾನ
ಪತಿ – ಆಯ್ದಕ್ಕಿ ಮಾರಯ್ಯ
ಸ್ಥಳ – ಅಮರೇಶ್ವರ
ಕಾಯಕ - ಅಕ್ಕಿ ಆಯುವುದು
ಅಂಕಿತ – ಮಾರಯ್ಯ ಪ್ರಿಯ ಅಮರೇಶ್ವರ ಲಿಂಗ

# ಆಯ್ದಕ್ಕಿ ಲಕ್ಕಮ್ಮ

ಅಂಗಕ್ಕೆ ಬಡತನವಲ್ಲದೆ  ಮನಕ್ಕೆ ಬಡತನವುಂಟೇ?
ಬೆಟ್ಟ ಬಲ್ಲಿತ್ತೆಂದಡೆ,ಉಳಿಯ ಮೊನೆಯಲ್ಲಿ
ಬಡತನವಿದ್ದಡೆ  ಒಡೆಯದೆ?
ಘನ ಶಿವಭಕ್ತರಿಗೆ ಬಡತನವಿಲ್ಲ ,ಸತ್ಯರಿಗೆ ದುಷ್ಕರ್ಮವಿಲ್ಲ,
ಎನಗೆ ಮಾರಯ್ಯ ಪ್ರಿಯ ಅಮರೇಶ್ವರ ಲಿಂಗವುಳ್ಳನ್ನಕ್ಕ
ಆರ ಹಂಗಿಲ್ಲ ಮಾರಯ್ಯ !!!

# ವಚನದ ಆಶಯ

ಅತಿಯಾಸೆ ಇಲ್ಲದಿದ್ದರೆ ಮನಸ್ಸು ಯಾವಾಗಲೂ ಶ್ರೀಮಂತಿಕೆಯನ್ನು ಅನುಭವಿಸುತ್ತದೆ. ಬೆಟ್ಟ ಬೃಹತ್ತಾಗಿರಬಹುದು. ಉಳಿಯ ಮೊನೆಗೆ ಬಡತನವಿದ್ದೀತೆ? ಸತ್ಪಾತ್ರನನ್ನು ದುಷ್ಕರ್ಮಗಳು ಕಾಡುವುದಿಲ್ಲ. ಘನ ಭಕ್ತರಿಗೆ ಬಡತನವಿಲ್ಲ. ಮಾರಯ್ಯ ಪ್ರಿಯ ಅಮಲೇಶ್ವರ ಲಿಂಗವನ್ನು ನಂಬಿರುವಾಗ ಅನ್ಯರ ಹಂಗು ನಮಗಿಲ್ಲ.

# ಮಾದರಿ ಪ್ರಶ್ನೆಗಳು – ಬಹು ಆಯ್ಕೆಯ ಪ್ರಶ್ನೆಗಳು.

**1 _____ಕ್ಕೆ ಬಡತನವಲ್ಲದೆ ಮನಕ್ಕೆ ಬಡತನವುಂಟೆ?**

1.ಮನಸು 2.ಬುದ್ಧಿ 3. ಅಂಗ 4. ಸಂಸ್ಕಾರ.

**2 ಸತ್ಯರಿಗೆ _____ ಇಲ್ಲ.**

1. ಪುಣ್ಯ 2. ದುಷ್ಕರ್ಮ 3. ಪಾಪ 4. ನೋವು.

# ಜೇಡರ ದಾಸಿಮಯ್ಯ /ದೇವರದಾಸಿಮಯ್ಯ

ಕಾಲ – ಕ್ರಿ.ಶ.ಸು. 1165

ತಂದೆ – ತಾಯಿ – ರಾಮಯ್ಯ ಮತ್ತು ಶಂಕರಿ

ಸ್ಥಳ – ಸುರಪುರ ತಾಲ್ಲೂಕು ಮುದನೂರು

ಹೆಂಡತಿ – ದುಗ್ಗಳೆ

ವೃತ್ತಿ – ನೇಕಾರಿಕೆ

ಅಂಕಿತ – ರಾಮನಾಥ

# ಜೇಡರದಾಸಿಮಯ್ಯನವರ ವಚನ

ಹರಿದ ಗೋಣಿಯಲೊಬ್ಬ ಕಳವೆಯ ತುಂಬಿದ.
ಇರುಳೆಲ್ಲ ನಡೆದನಾ ಸುಂಕಕ್ಕಂಜಿ:
ಕಳವೆಯೆಲ್ಲಾ ಹೋಗಿ ಬರಿ ಗೋಣಿ ಉಳಿಯಿತ್ತು!
ಅಳಿಮನದವನ ಭಕ್ತಿ ಇಂತಾಯಿತ್ತು! ರಾಮನಾಥ.

# ಪದಗಳ ಅರ್ಥ

ಕಳವೆ – ಭತ್ತ

ಇರುಳು – ರಾತ್ರಿ

ಸುಂಕ – ತೆರಿಗೆ

ಅಳಿಮನ – ದೃಢತೆ ಇಲ್ಲದ

# ವಚನದ ಆಶಯ

ಈ ವಚನದಲ್ಲಿ ದೃಢತೆ ಇಲ್ಲದ ಮನಸ್ಸಿನ ಕಳವಳ ಮತ್ತು ತೊಳಲಾಟ ಇಲ್ಲಿ ವ್ಯಕ್ತವಾಗಿದೆ . ಒಬ್ಬ ರೈತ ತಾನು ಬೆಳೆದ ಬತ್ತವನ್ನು ಮಾರುಕಟ್ಟೆಗೆ ಸಾಗಿಸುವಾಗ ಅನಿವಾರ್ಯವಾಗಿ ತೆರಬೇಕಾದ ಸುಂಕವನ್ನು ತಪ್ಪಿಸಲು ರಾತ್ರಿಯಿಡೀ ನಡೆದು ಹೋಗುತ್ತಾನೆ. ಸುಂಕ ತಪ್ಪಿಸಿಕೊಳ್ಳಲು ಹೋಗಿ ಕಷ್ಟ ಪಟ್ಟು ಬೆಳೆದ ಬೆಳೆಯನ್ನೇ ಕಳೆದು ಕೊಳ್ಳುತ್ತಾನೆ. ಇದು ಒಂದು ರೀತಿಯ ಮೂರ್ಖತನವಾದರೆ, ಇನ್ನೊಂದು ರೀತಿಯಲ್ಲಿ ಅಂತಃಕರಣ ಶುದ್ಧವಿಲ್ಲದವನ ಮನಸ್ಸು ಮತ್ತು ಭಕ್ತಿ ಎರಡು ಸಹ ವ್ಯರ್ಥವಾದ ಅಂಶಗಳು ಎಂಬ ಮಾತನ್ನು ನಿದರ್ಶನದ ಸಮೇತ ವಿವರಿಸಲಾಗಿದೆ.

ಇಲ್ಲಿ ಹರಿದ ಗೋಣಿ ಅಂದರೆ ತನ್ನನ್ನು ತಾನು ಅರಿಯದೆ ಅಜ್ಞಾನದ ಕತ್ತಲೆಯಲ್ಲಿ ಜೀವನ ಸಾಗಿಸುತ್ತಿರುವ ಮನಸ್ಸು ಮತ್ತು ಸುಂಕಕ್ಕೆ ಅಂಜಿ ರಾತ್ರಿಯೆಲ್ಲ ನಡೆಯುವುದು ಅಂದರೆ ತನ್ನನ್ನು ತಾನು ಅರಿಯಲು ಪ್ರಯತ್ನಿಸದೆ ಇರುವುದು ಎಂದು ಭಾವಿಸಬಹುದು. ಬರಿಯ ಗೋಣಿ ಉಳಿಯಿತ್ತು ಅಂದರೆ ಕೇವಲ ದೇಹ ಉಳಿದಿತ್ತು ಎಂದು ಅರ್ಥೈಸಬಹುದು. ಅಳಿಮನದವನ ಭಕ್ತಿ ಅಂದರೆ ಯಾವುದೇ ಒಂದು ಕಡೆ ದಿಟ್ಟ ಗುರಿ ಇಲ್ಲದ ಚಂಚಲ ಮನಸ್ಸಿನವನು, ಅವನಲ್ಲಿ ಭಕ್ತಿಯೂ ಕೂಡ ಹಾಗೆ ದೃಢತೆ ಇರುವುದಿಲ್ಲ ಎಂದು ಜೇಡರ(ದೇವರ) ದಾಸಿಮಯ್ಯನವರು ಹೇಳುತ್ತಾರೆ.

Activate Windows

## ಮಾದರಿ ಪ್ರಶ್ನೆಗಳು – ಬಹು ಆಯ್ಕೆಯ ಪ್ರಶ್ನೆಗಳು.

1 ಸುಂಕಕ್ಕೆ ಹೆದರಿ ಹರಿದಗೋಣಿಯಲ್ಲಿ ______ ತುಂಬಿದ.

1.ರಾಗಿ 2. ಭತ್ತ 3.ಎಳ್ಳು 4.ಕಾಳು

2 ಜೇಡರ ದಾಸಿಮಯ್ಯನ ಅಂಕಿತನಾಮ ಯಾವುದು?

1.ಗುಹೇಶ್ವರ 2.ಚೆನ್ನಮಲ್ಲಿಕಾರ್ಜುನ 3.ಅಮರೇಶ್ವರಲಿಂಗ 4.ರಾಮನಾಥ.

3 ಇರುಳು ಪದದ ಅರ್ಥವೇನು?

1.ರಾತ್ರಿ 2. ಹಗಲು 3.ಸಂಜೆ 4.ಮುಸ್ಸಂಜೆ

# ಆಯ್ದಕ್ಕಿ ಮಾರಯ್ಯ

ಕಾಲ – 1160

ಸ್ಥಳ - ಅಮರೆಶ್ವರ

ಪತ್ನಿ – ಲಕ್ಕಮ್ಮ

ಕಾಯಕ - ಅಕ್ಕಿ ಆಯುವುದು

ಅಂಕಿತ - ಅಮರೇಶ್ವರ ಲಿಂಗ

# ಆಯ್ದಕ್ಕಿ ಮಾರಯ್ಯ

ಕಾಯಕದಲ್ಲಿ ನಿರತನಾದಡೆ
ಗುರು ದರ್ಶನವಾದಡೂ ಮರೆಯಬೇಕು,
ಲಿಂಗ ಪೂಜೆಯಾದಡೂ ಮರೆಯಬೇಕು,
ಜಂಗಮ ಮುಂದೆ ನಿಂದಿದ್ದಡೂ ಹಂಗ ಹರಿಯಬೇಕು
ಕಾಯಕವೆ ಕೈಲಾಸವಾದ ಕಾರಣ
ಅಮರೇಶ್ವರ ಲಿಂಗವಾಯಿತ್ತಾದಡು ಕಾಯಕದೊಳಗು.

ಪದಗಳ ಅರ್ಥ

ಕಾಯಕ - ಕೆಲಸ

# ವಚನದ ಆಶಯ

ಕಾಯಕಕ್ಕೆ ಮಹತ್ವ ಕೊಡುವ ಈ ವಚನದಲಿ ಆಯ್ದಕ್ಕಿ ಮಾರಯ್ಯ ಗುರು,ಲಿಂಗ,ಜಂಗಮ ಎಂಬ ತ್ರಿವಿಧಕ್ಕಿಂತ ಕಾಯಕವೇ ಶ್ರೇಷ್ಠ ಎಂದು ಬಿಂಬಿಸುತಾನೆ. ಕಾಯಕದಲಿ ನಿರತನಾಗಿರುವವನಿಗೆ ಬೇರೆ ಇನ್ನೇನು ಕಾಣಬಾರದು ಎಂದು ಹೇಳುತಾನೆ. ತನ್ನ ಗುರು ಬಂದರೂ ಕೂಡ, ತನ್ನ ಕಾಯಕಕ್ಕೆ ತೊಡಕಾಗಬಾರದು. ಶರಣರಿಗೆ ಗುರುವಿನ ದರ್ಶನ ಮಂಗಳಕರವಾದದ್ದು, ಆದರೂ ಇಲ್ಲಿ ಗುರುವಿಗಿಂತ ಕಾಯಕಕ್ಕೆ ಪ್ರಾಮುಖ್ಯತೆ ಕೊಡುತ್ತಾನೆ ಮಾರಯ್ಯ.

ಅದೇ ರೀತಿ ,ಲಿಂಗ ಪೂಜೆ ಸಮಯ ಆದರೂ ಕೂಡ ತನ್ನ ಕಾರ್ಯ ಮೊದಲು ಮುಗಿಸುವುದು ಲೇಸು ಎಂದು ಅಭಿಪ್ರಾಯ ವ್ಯಕಪಡಿಸುತಾನೆ. ತಾನು ಕೆಲಸದಲ್ಲಿ ನಿರತನಾಗಿದ್ದಾಗ ಜಂಗಮರಿಗೆ ಕಾಣಿಕೆ ಅರ್ಪಿಸುವುದು ಕೂಡ ತರವಲ್ಲ, ಅದಕ್ಕಿಂತ ಅವನ ಕಾಯಕ ಮುಖ್ಯ ಎನ್ನುತ್ತಾನೆ.

ಈ ವಚನದಲ್ಲಿ ಮಾರಯ್ಯ ಕಾಯಕ ಯೋಗಿಯ ಶ್ರಮಕ್ಕೆ ಮೆಚ್ಚುಗೆ ವ್ಯಕಪಡಿಸುತಾನೆ. ಅಲ್ಲದೆ, ಹೊಲದಲ್ಲಿ ಅಕ್ಕಿ ಆಯುವ ತನ್ನ ವೃತ್ತಿಯಲ್ಲಿ ತಾನು ಕೈಲಾಸವನ್ನು ಕಾಣುತೇನೆ ಎಂದು ಹೇಳುತಾನೆ. ಇಲಿ ತನ್ನ ಕಾಯಕದಿಂದ ವ್ಯಕಿಯೊಬ್ಬ ದೇವರನ್ನು ಮತ್ತು ದೇವರ ಅಸಿತ್ವವನ್ನು ಅನುಭವಿಸಬಹುದು ಮತ್ತು ತನ್ನ ವೃತ್ತಿಯಿಂದ ದೇವರನ್ನು ಕಂಡುಕೊಳ್ಳಬಹುದು ಎನ್ನುತ್ತಾನೆ.ಈ ವಚನ ಶರಣರು ಕಾಯಕಕ್ಕೆ ನೀಡಿದ ಮಹತ್ವವನ್ನು ಸಾರುತ್ತದೆ.

Activate Windows
Go to Settings to activate Windows

# ಮಾದರಿ ಪ್ರಶ್ನೆಗಳು – ಬಹು ಆಯ್ಕೆಯ ಪ್ರಶ್ನೆಗಳು.

1 ಮಾರಯ್ಯನ ಕಾಯಕ ಯಾವುದು?

1. ನೇಯ್ಗೆ 2. ಬೇಸಾಯ 3. ಅಕ್ಕಿ ಆಯುವುದು 4. ಹಾಡುವುದು.

2 ಕಾಯಕದಲ್ಲಿ ನಿರತನಾದಡೆ ________ ದರ್ಶನವಾದಡೂ ಮರೆಯಬೇಕು.

1. ಲಿಂಗ 2. ಗುರು 3. ಜಂಗಮ 4.ಶಿವ

3 ಕಾಯಕದಲ್ಲಿ ನಿರತನಾದಡೆ ________ ಪೂಜೆಯಾದಡೂ ಮರೆಯಬೇಕು.

1. ಜಂಗಮ 2. ಶಿವ 3.ಗುರು 4. ಲಿಂಗ.

# ಕೀರ್ತನೆಗಳು

- ಅಧಿದೈವವನ್ನು ಕುರಿತು ದಾಸರು ಕಟ್ಟಿದ ಹಾಡುಗಳೆ ಕೀರ್ತನೆಗಳು.
- ಪಲ್ಲವಿ, ಅನುಪಲ್ಲವಿ ಮತ್ತು ನುಡಿ – ಮೂರು ಧಾತುಗಳು.
- ವಸ್ತು – ಭಕ್ತಿ.
- ನಡುಗನ್ನಡ ಸಾಹಿತ್ಯ

# ಕೀರ್ತನೆಗಳ ಸಂಕ್ಷಿಪ್ತ ವಿವರಣೆ

ಮಧ್ಯಕಾಲೀನ ಭಾರತದಲ್ಲಿ ತಮ್ಮ ತಮ್ಮ ಇಷ್ಟ ದೈವಗಳನ್ನು ಆರಾಧಿಸುವ ಅನೇಕ ಧಾರ್ಮಿಕ ಪಂಥಗಳು ಮೈದಾಳಿದ್ದನ್ನು ನಾವು ಕಾಣಬಹುದು. ಅದು ಕರ್ನಾಟಕದಲ್ಲಿ ಮಾನವೀಯತೆಯ ಸ್ಪರ್ಶಕ್ಕೆ ಒಳಗಾಗಿ ಉಪದೇಶಾಮೃತವಾಗಿ ಪರಿವರ್ತಿತವಾಯಿತು. ಹರಿಯೇ ಸರ್ವೋತ್ತಮ ಎಂಬ ಗಾಢನಂಬಿಕೆಯಿಂದ ಕೀರ್ತನೆಗಳನ್ನು ರಚಿಸಿ - ಹಾಡಿದ ದಾಸರು ಅಷ್ಟಕ್ಕೇ ಸೀಮಿತವಾಗದೆ ಡಾಂಭಿಕತೆ, ಆಸೆ, ಆಮಿಷಗಳನ್ನು ಧಿಕ್ಕರಿಸಿ ನಿಂತದ್ದು ಸಾಮಾನ್ಯ ಸಂಗತಿಯಲ್ಲ. ಕನ್ನಡದಲ್ಲಿ ಲಭ್ಯವಿರುವ ಸಾವಿರಾರು ಬಗೆಯ ಕೀರ್ತನೆಗಳು ತಾಳ – ತಂಬೂರಿಗಳ ಜತೆಗೂಡಿ ಒಂದು - ಸಂಗೀತ ಸಂಪ್ರದಾಯವನ್ನೇ ಹುಟ್ಟು ಹಾಕಿವೆ. ಸುಶ್ರಾವ್ಯ ಗಾಯನ ಗುಣದ ಮೂಲಕ ಜನಸಾಮಾನ್ಯರನ್ನು ತಲುಪಿವೆ. ನಮ್ಮ ದಾಸರು ಮತ್ತು ಕೀರ್ತನಕಾರರು ಕೇವಲ ಸಾಹಿತ್ಯ ರಚಿಸಿದ್ದಷ್ಟೇ ಅಲ್ಲ, ಸ್ವತಃ ತಾವೇ ಪಯಣಿಗನಾಗಿ ತಾಳ ತಂಬೂರಿಗಳನ್ನು ಹಿಡಿದು ಹಾಡಿದ್ದಾರೆ. ಜನತೆಗೆ ಸುಜ್ಞಾನ ಮಾರ್ಗದ ದಾರಿ ತೋರಿದ್ದಾರೆ. ಅಂಥ ಪ್ರಮುಖ ಕೀರ್ತನಕಾರರಲ್ಲಿ ಪುರಂದರದಾಸ ಮತ್ತು ಕನಕದಾಸ ಪ್ರಮುಖರು. ಅವರ ಒಂದೊಂದು ಕೀರ್ತನೆಗಳನ್ನು ಇಲ್ಲಿ ಸಾಂಕೇತಿಕವಾಗಿ ನೀಡಲಾಗಿದೆ.

VTU - Sanskrutika Ka

# ಪುರಂದರ ದಾಸರು

- ಕರ್ನಾಟಕ ಸಂಗೀತ ಪಿತಾಮಹ
- ಕಾಲ – ಕ್ರಿ.ಶ. ಸು. 1484 – 1564
- ಸ್ಥಳ – ಪುರಂದರಗಡ
- ಗುರು – ವ್ಯಾಸರಾಯರು
- ಕೃತಿ – ಪುರಂದರೋಪನಿಷತ್ತು ಮೊದಲಾದವು
- ನಾಲ್ಕು ಲಕ್ಷಕ್ಕೂ ಹೆಚ್ಚು ಕೀರ್ತನೆಗಳ ರಚನೆ.
- ಅಂಕಿತನಾಮ – ಪುರಂದರ ವಿಠಲ



Activate Windows
Go to Settings to activate Windows

# ಅದರಿಂದೇನು ಫಲ ಇದರಿಂದೇನು ಫಲ

– ಪುರಂದರದಾಸ

ಅದರಿಂದೇನು ಫಲ ಇದರಿಂದೇನು ಫಲ ನಮ್ಮ
ಪುರಂದರವಿಠಲನ ನಾಮವ ನೆನೆಯದೆ ॥-ಪ॥

ಹೃದಯದ ಮಲವನು ತೊಳೆಯಲಾರದೆ ವ್ಯರ್ಥ
ಉದಯಾಸ್ತಮಾನ ನೀರೊಳು ಮುಳುಗುವರು
ಅದಕಿಂತ ಸರ್ವದಾ ನೀರೊಳಗಿರುತಿಪ್ಪ
ಮುದಿಕಪ್ಪೆ ಮಾಡಿದ ತಪ್ಪೇನಯ್ಯ –1

ಹಲವು ಕಾಲ ಕಲ್ಲು ನೀರೊಳ-ಗಿದ್ದರೇನು
ಬಲು ನೆನೆದಮೃತಶಿಲೆಯಾಗುವುದೆ
ಕರದಲಿ ಜಪಮಾಲೆ ಮಣಿಗಳನೆಣಿಸುತ
ಪರನಿಂದೆ ಬಾಯಲಿ ಮಾಡುವರಯ್ಯ –2

ಸ್ನಾನವ ಮಾಡುವರು ಆಸನ ಹಾಕುವರು

ಮೌನದಿ ಚಪ್ಪಾಳಿಟ್ಟು ಹಕ್ಕಿ ಬೆದರುವಂತೆ

ಕಣ್ಣನ್ನು ಮುಚ್ಚುವರು ಮೂಗನ್ನೆ ಹಿಡಿವರು

ಚೆನ್ನಾಗಿ ಮನವ ನಿಲ್ಲಿಸಲರಿಯರು ವ್ಯರ್ಥ -3

ನೇಮವನು ತಾಳುವರು ದಾನವ ಮಾಡುವರು

ಕಾಮಕ್ರೋಧ ಮದ ಮತ್ಸರ ಬಿಡದೆ ಇಂಥ

ನಾಯಿ ಕುನ್ನಿಗಳ ಕಂಡೊಳಗಿಟ್ಟುಕೊಂಡರೆ

ಕಾಶಿಯಲಿ ಮುಳುಗಿದ ಫಲವೇನಯ್ಯ –4

ಮೂರು ಜೋಡಿ ವನಮಾಲೆಯು ಕೊರಳೊಳು
ಜೋಗಿಣಿಯ ಕವಡೆಯ ಸರದಂತೆ
ಮೂರಾರು ಪುರಾಣ ತಿರುವಿ ಹಾಕುವರು
ಮಾರಪಿತನ ಮನಮುಟ್ಟಿ ಭಜಿಸದೆ ವ್ಯರ್ಥ –5

ಹಸಿವಾಯಿತೇಳು ದೇವರ ತೊಳೆಯೆಂಬರು
ಹಸನಾಗಿ ಮನಮುಟ್ಟಿ ಪೂಜಿಸರು
ಹೊಸ ಹಾವಿನ ಬುಟ್ಟಿಯಂತೆ ಮುಂದಿಟ್ಟುಕೊಂಡು
ವಸುಧೆಯೊಳ್ಗಾರುಡಿಯಾಟವಾಡುವರು -6

ಪರಧನ ಪರಸತಿ ಪರನಿಂದೆಗಳಿಗಳುಕುತ
ತೊರೆಯೊಳು ಮಿಂದರೆ ದುರಿತ ಪೋಗುವುದೆ
ಸರ್ವವ ತೊರೆದು ಹರಿಯ ಧ್ಯಾನಮಾಡಲು
ವರವ ಕೊಡುವ ನಮ್ಮ ಪುರಂದರ-ವಿಠಲ –7

Activate Wi

# ಆಶಯ

ದಾಸಸಾಹಿತ್ಯದಲ್ಲಿ ಶ್ರೇಷ್ಠರಾದ ಶ್ರೀ ಪುರಂದರರದಾಸರು ನಮ್ಮ ಧ್ಯಾನ ಭಕ್ತಿ ಮಡಿ-ಮೈಲಿಗೆ ಮಡಿವಂತಿಕೆ ಪೂಜೆ-ಪುನಸ್ಕಾರಗಳು ಇವುಗಳಲ್ಲಿ ನಾವು ತೋರುವ ಡಾಂಭಿಕ ಭಕ್ತಿಯ ವಿವಿಧ ಬಗೆಗಳನ್ನು ನಿದರ್ಶನಗಳ ಮುಖಾಂತರ ವಿವರಿಸಿದ್ದಾರೆ. ಹೃದಯದಲ್ಲಿರುವ ಕಲ್ಮಶವನ್ನು ತೊಳೆಯಲಾರದವನು ದೇವರ ಪೂಜೆಗೆಂದು ಸೂರ್ಯೋದಯಕ್ಕಿಂತ ಮೊದಲು ನೀರಿನಲ್ಲಿ ಮುಳುಗಿದರೆ ಏನು ಪ್ರಯೋಜನ ಕಾರಣ ನಾವು ಸದಾ ನೀರಿನೊಳಗೆ ಇರುವ ಕಪ್ಪೆಯನ್ನು ಮುಟ್ಟುವುದಿಲ್ಲ, ಅದನ್ನು ಮೈಲಿಗೆಯೆಂದು ದೂರ ಇಡುತ್ತೇವೆ. ಹಲವು ಕಾಲ ಕಲ್ಲು ನೀರೊಳಗಿದ್ದರೆ ನೆನೆದು ಅಮೃತಶಿಲೆ ಆಗುವುದೇ? ಅದೇ ರೀತಿ ಮನದಲ್ಲಿ ಜಪಮಾಲೆಯನ್ನು ಎಣಿಸುತ್ತಾ ಪರರ ನಿಂದನೆ ಮಾಡಿದರೆ ಮನಸ್ಸು ಶಾಂತವಾಗುವುದೇ?, ಆದುದರಿಂದ ಯಾವುದೇ ಕೆಲಸವನ್ನು ಮಾಡಿದರೆ ಅಂತಹ ಕೆಲಸವನ್ನು ದೇವರ ಮೇಲಿನ ಭಕ್ತಿಯಿಂದ ಶಾಂತಚಿತ್ತರಾಗಿ ನಮ್ಮ ಕಾರ್ಯವನ್ನು ಮಾಡಬೇಕು ಇಲ್ಲದಿದ್ದರೆ ನಾವು ಮಾಡುವ ಎಲ್ಲಾ ಕೆಲಸಗಳು ಬೂಟಾಟಿಕೆ ಡಾಂಭಿಕ ಭಕ್ತಿಯ ಪ್ರದರ್ಶನ, ಅರ್ಥವಿಲ್ಲದ ಮಡಿ-ಮೈಲಿಗೆಗಳು ಆಗುತ್ತವೆ ಎಂಬ ವಿಷಯಗಳನ್ನು ವಿವಿಧ ನಿದರ್ಶನಗಳ ಮುಖಾಂತರ ಪುರಂದರರದಾಸರು ವಿವರಿಸಿದ್ದಾರೆ.

Activate Windows
Go to Settings to activate Windows.

ಮಾದರಿ ಪ್ರಶ್ನೆಗಳು - ಬಹು ಆಯ್ಕೆಯ ಮಾದರಿ.

1.ಅದರಿಂದೇನು ಫಲ ಇದರಿಂದೇನು ಫಲ ಕೀರ್ತನೆಯ ರಚನಕಾರರು ಯಾರು?

1 ಕನಕದಾಸರು 2 ಪುರಂದರ ದಾಸರು 3 ಹರಿದಾಸರು 4 ಜಗನ್ನಾಥರು

2.ಹೃದಯದ ----- ತೊಳೆಯಲಾರದೆ ವ್ಯರ್ಥ

1 ಮಲ 2 ಕೊಳೆ 3 ಭಕ್ತಿ 4 ಭಾವ

3ತೊರೆಯೊಳು ---- ದುರಿತ ಪೋಗುವುದೆ

1 ಹಾಡಿದರೆ 2 ಮರೆತರೆ 3 ಕುಣಿದರೆ 4 ಮಿಂದರೆ

4 ಕರ್ನಾಟಕ ಸಂಗೀತ ಪಿತಾಮಹ ಯಾರು?

1 ಕನಕದಾಸರು 2 ಪುರಂದರ ದಾಸರು 3 ಹರಿದಾಸರು 4 ಜಗನ್ನಾಥರು

# ಕನಕದಾಸರು

- ಕಾಲ – ಕ್ರಿ.ಶ. ಸು. 1609
- ಸ್ಥಳ – ಧಾರವಾಡ ಜಿಲ್ಲೆ ಬಾಡ ಗ್ರಾಮ
- ಗುರು – ವ್ಯಾಸರಾಯರು
- ತಂದೆ –ಬೀರಪ್ಪ, ತಾಯಿ – ಬಚ್ಚಮ್ಮ
- ಮೂಲಹೆಸರು - ತಿಮ್ಮಪ್ಪನಾಯಕ
- ಕೃತಿಗಳು – ಹರಿಭಕ್ತಿಸಾರ, ರಾಮಧಾನ್ಯಚರಿತೆ,ನಳಚರಿತ್ರೆ,ಮೋಹನತರಂಗಿಣಿ.
- ಅಂಕಿತನಾಮ – ಕಾಗಿನೆಲೆಯಾದಿಕೇಶವ



Activate Windows
Go to Settings to activate Windows.

# ತಲ್ಲಣಿಸದಿರು -ಕಂಡ್ಯ -ತಾಳು -ಮನವೆ

- ಕನಕದಾಸ

ತಲ್ಲಣಿಸದಿರು ಕಂಡ್ಯ ತಾಳು ಮನವೇ ॥ಪ॥

ಎಲ್ಲರನು ಸಲಹುವನು ಇದಕೆ ಸಂಶಯವಿಲ್ಲ ಅ

ಬೆಟ್ಟದಾ ತುದಿಯಲ್ಲಿ ಹುಟ್ಟಿದ -ವೃಕ್ಷಕ್ಕೆ
ಕಟ್ಟೆಯನು ಕಟ್ಟಿ ನೀರೆರೆದವರು ಯಾರೊ
ಪುಟ್ಟಿಸಿದ ಸ್ವಾಮಿ ತಾ ಹೊಣೆಗಾರನಾಗಿರಲು
ಗಟ್ಯಾಗಿ ಸಲಹುವನು ಇದಕೆ ಸಂಶಯವಿಲ್ಲ 1

ಅಡವಿಯೊಳಗಾಡುವ ಮೃಗ ಪಕ್ಷಿಗಳಿಗೆಲ್ಲ
ಅಡಿಗಡಿಗೆ ಆಹಾರವಿತ್ತವರು ಯಾರೊ
ಪಡೆದ ಜನನಿಯ ತೆರದಿ ಸ್ವಾಮಿ ಹೊಣೆಗೀಡಾಗಿ
ಬಿಡದೆ ರಕ್ಷಿಪನು ಇದಕೆ ಸಂಶಯವಿಲ್ಲ 2

ನವಿಲಿಗೆ ಚಿತ್ರ ಬರೆದವರು ಯಾರು
ಪವಳದ ಲತೆಗೆ ಕೆಂಪಿಟ್ಟವರು ಯಾರು
ಸವಿಮಾತಿನರಗಿಳಿಗೆ ಹಸುರು ಬರೆದವರು ಯಾರು
ಅವನೆ ಸಲಹುವನು ಇದಕೆ ಸಂಶಯವಿಲ್ಲ -3

ಕಲ್ಲಿ-ನಲಿ ಹುಟ್ಟಿ ಕೂಗುವ ಕಪ್ಪೆಗಳಿಗೆಲ್ಲ
ಅಲ್ಲಲ್ಲಿಗಾ-ಹಾರ ತಂದೀವರಾರು
ಬಲ್ಲಿದನು ಕಾಗಿ-ನೆಲೆಯಾದಿಕೇಶವರಾಯ
ಎಲ್ಲರನು ಸಲಹುವನು ಇದಕೆ ಸಂಶಯವಿಲ್ಲ. -4

Activate Windo

# ಕನಕ ದಾಸರ ಕೀರ್ತನೆಯ ಆಶಯ

ದಾಸಸಾಹಿತ್ಯದಲ್ಲಿ ಶ್ರೇಷ್ಠರಾದ ಕನಕದಾಸರು ತಮ್ಮ ಕೀರ್ತನೆಗಳಲ್ಲಿ ಮನಸ್ಸಿನ ಆಳದಲ್ಲಿ ಮನೆಮಾಡಿರುವ ಗೊಂದಲಗಳಿಗೆ ಉತ್ತರಗಳನ್ನು ಕೊಡುವ ಪ್ರಯತ್ನ ಮಾಡಿದ್ದಾರೆ. ಬೆಟ್ಟದ ತುದಿಯಲ್ಲಿ ಹುಟ್ಟಿದ ಗಿಡ-ಮರಗಳಿಗೆ ಯಾರು ಕಟ್ಟೆ ಕಟ್ಟಿ ನೀರನ್ನು ಹಾಕುವುದಿಲ್ಲ. ಬದಲಾಗಿ ಅವುಗಳು ಬದುಕುವ ಮಾರ್ಗ ದೈವ ಸೃಷ್ಟಿ. ಅಡವಿಯೊಳಗೆ ಅಡಗಿರುವ ಪ್ರಾಣಿ-ಪಕ್ಷಿಗಳಿಗೆ ಆಹಾರವನ್ನು ನೀಡುವುದು ಪ್ರಕೃತಿಯ ಮಧ್ಯದಲ್ಲಿ ನಡೆಯುವ ಯಶೋಗಾಥೆಗಳಾಗಿವೆ. ಸೃಷ್ಟಿಕರ್ತನು ಎಲ್ಲಾ ಜೀವಿಗಳನ್ನು ಸಲಹುವಂತೆ ನಿಮ್ಮನ್ನು ಸಹ ಸಲಹುತ್ತಾನೆ ಎಂಬ ಭರವಸೆ ಇರಲಿ ಎಂದಿದ್ದಾರೆ.

Activate Windows

ಮಾದರಿ ಪ್ರಶ್ನೆಗಳು – ಬಹು ಆಯ್ಕೆಯ ಮಾದರಿ.

1 ವೃಕ್ಷ ಪದದ ಅರ್ಥವೇನು?

1 ಗಿಡ 2 ಮರ 3 ಬಳ್ಳಿ 4 ರಾಕ್ಷಸ

2 ರಾಮಧಾನ್ಯ ಚರಿತೆ ಈ ಕೃತಿಯ ಕರ್ತೃ ಯಾರು?

1 ಪುರಂದರದಾಸರು 2 ರಾಘವಾಂಕರು 3 ಜಗನ್ನಾಥರು 4 ಕನಕದಾಸರು

3 ಪವಳದ ಲತೆಗೆ ____ ಇಟ್ಟವರು ಯಾರು

1 ಕಪ್ಪು 2 ಹಸಿರು 3 ಚಿತ್ರ 4 ಕೆಂಪು

# ತತ್ವಪದಗಳು

## ಸಾವಿರ ಕೊಡಗಳ ಸುಟ್ಟು

– ಶಿಶುನಾಳ ಶರೀಫ

ಕುಂಬಾರಕಿ ಈಕಿ ಕುಂಬಾರಕಿ ಈ
ಬ್ರಹ್ಮಾಂಡವೆಲ್ಲ ತುಂಬಿಕೊಂಡಿರುವಾಕಿ

ಚಿನ್ನ ಎಂಬುವ ಮಣ್ಣನು ತರಸಿ
ತನು ಎಂಬುವ ನೀರನು ಹಣಿಸಿ
ಮನ ಎಂಬುವ ಹುದಲನು ಕಲಸಿ
ಗುಣ ಎಂಬುವ ಸೂಸನು ಹಾಕಿ

ಭಕ್ತಿ ಎಂಬುವ ತಿಗರಿಯ ಮಾಡಿ
ಧ್ಯಾನ ಎಂಬುವ ಬಡಗಿಯ ಊರಿ
ಮುನ್ನೂರರವತ್ತು ಸುತ್ತನು ತಿರುಗಿ
ಗಡಗಿ ತಯಾರು ಮಾಡುವಾಕಿ

ಆಚಾರ ಎಂಬುವ ಆವಿಗೆ ಮುಚ್ಚಿ
ಅರಿವು ಎಂಬುವ ಬೆಂಕಿಯ ಹಚ್ಚಿ
ಸಾವಿರ ಕೊಡಗಳ ಸುಟ್ಟು ಇಂದು
ಸಂತಿಗೆ ಒಯ್ದು ಮಾರುವಾಕಿ

ಮೂರು ಕಾಸಿಗೊಂದು ಕುಡಕಿಯ ಮಾರಿ
ಆರು ಕಾಸಿಗೊಂದು ಗಡಿಗೆಯ ಮಾರಿ
ವಸುಧೆಯೊಳು ಶಿಶುನಾಳಧೀಶನ ಮುಂದೆ
ಧ್ಯಾನದ ಮಗಿಯೊಂದು ಇಡುವಾಕಿ

## ತತ್ವಪದಗಳ ಸಂಕ್ಷಿಪ್ತ ವಿವರಣೆ:

ವಚನ ಮತ್ತು ಕೀರ್ತನೆಗಳ ನಂತರ ಕನ್ನಡ ನಾಡಿನಲ್ಲಿ ಉದಯಿಸಿದ ಮತ್ತೊಂದು ಪ್ರಮುಖ ಪ್ರಕಾರವೆಂದರೆ ತತ್ವಪದಗಳು. ಆದರೆ ಇದು ಶರಣರು ಅಥವಾ ದಾಸರಿಗಿಂತ ಭಿನ್ನ ಸ್ತರದ ಅನುಭಾವಿಗಳು ರೂಪಿಸಿದ ಸಾಹಿತ್ಯ ಪ್ರಕಾರ. ಶರಣರು ಶಿವನ ಭಕ್ತರು, ದಾಸರು ಹರಿಯ ಭಕ್ತರು. ಆದರೆ ಈ ತತ್ವಪದಕಾರರು ಅಂಥ ನಿರ್ದಿಷ್ಟ ದೈವಪಂಥಗಳಿಗೆ ಸೀಮಿತವಾದವರಲ್ಲ. ಹಾಗೆಂದು ಅವರಿಗೆ ದೈವದ ಅಥವಾ ಗುರುವಿನ ಅಂಕಿತ ಇಲ್ಲವೆಂದಲ್ಲ. ಅವರವರ ಭಾವಕ್ಕೆ ಅವರವರ ತೆರನಾಗಿ – ದೈವವನ್ನು ಕಂಡವರು ಇವರು. ಸಮಾಜದ ಶ್ರೇಣೀಕರಣ ವ್ಯವಸ್ಥೆಯನ್ನು ವಿರೋಧಿಸುತ್ತಲೇ ಮನುಷ್ಯನ ಪರಿಶುದ್ಧವಲ್ಲದ ಜೀವನವನ್ನು ವಿಡಂಬಿಸಿ ಕೃತಿ ರಚನೆ ಮಾಡಿದರು. ದಾಸರಂತೆ ಇವರು ಕೂಡ ತಂಬೂರಿ ತಾಳಗಳೊಂದಿಗೆ ಹಾಡುತ್ತಾ ಊರೂರುಗಳಲ್ಲಿ ತಮ್ಮ ಅನುಭವದ ಜ್ಞಾನವನ್ನು ಧಾರೆ ಎರೆದರು. ಜಾತಿ–ಜಾತಿಗಳ, ಧರ್ಮ–ಧರ್ಮಗಳ ನಡುವೆ ಭಾವೈಕ್ಯದ ಸೇತುವೆಯಂತೆ ಕಾರ್ಯ ನಿರ್ವಹಿಸುತ್ತಾ ಸಮಾಜದ ಸುಸ್ಥಿತಿಯನ್ನು ಹಾರೈಸಿದರು.

## ತತ್ವಪದಗಳ ಮೂಲ ಆಶಯ:

ಬದುಕಿಗೆ ಅವಶ್ಯಕವಾದ ಜೀವನ ತತ್ವವನ್ನು, ಆಧ್ಯಾತ್ಮಿಕ ಜ್ಞಾನವನ್ನು ಸುಶ್ರಾವ್ಯ ಹಾಡುಗಳ ಮೂಲಕವೇ ನಾಡಿನ ತತ್ವಪದಗಳ ರಚನೆಕಾರರು ತಮ್ಮ ಜ್ಞಾನವನ್ನು ಧಾರೆ ಎರೆದಿದ್ದಾರೆ. ಅವರಲ್ಲಿ ಸಂತ ಶಿಶುನಾಳ ಷರೀಫ ಅವರ ತತ್ವಪದಗಳನ್ನು – ಇಲ್ಲಿ ನೀಡಲಾಗಿದೆ.